50. ಹಕ್ಕಿಯು ಯಾವುದರ ಸಂಕೇತವಾಗಿದೆ?

ಕಾಲಪಕ್ಷಿಯ

51. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?

ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು

52. ಹಲಗಲಿಯ ನಾಲ್ವರು ಪ್ರಮುಖರು ಯಾರು?

ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ

53 ಹಲಗಲಿಯ ಗುರುತು ಉಳಿಯದಂತಾದದು ಏಕೆ?

ಹಲಗಲಿಯ ಮೇಲೆ ಬ್ರಿಟೀಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ

54. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?

ಹಲಗಲಿಯ ಬೇಡರ ಹತಾರ ಕದನ

55. ಹಲಗಲಿ ಗ್ರಾಮ ಎಲ್ಲಿದೆ?

ಹಲಗಲಿ ಮುಧೋಳ ಸಂಸ್ಥಾನದಲ್ಲಿ

56. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?

ಸತಿಪತಿಗಳು ಒಂದಾದ ಭಕ್ತಿ

57. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ?

ಪಟ್ಟಣ

58. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?

ಅಂದಣವನ್ನು ಏರಿದ ಸೊಣಗ(ನಾಯಿ)ಕ್ಕೆ

59. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ?

ನುಡಿಗೆ ತಕ್ಕ ನಡೆ ಇಲ್ಲದಿದ್ದರೆ

60. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?

ಬಿರುಗಾಳಿಗೆ ಹೊಯ್ದಾಡುವ ಹಡಗನ್ನು

61. ನದೀಜಲಗಳು ಏನಾಗಿವೆ?

ಕಲುಷಿತವಾಗಿವೆ.

62. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?

ಕಲುಷಿತವಾಗಿರುವ ನದೀಜಲಗಳಿಗೆ

63. ಕಾಡುಮೇಡುಗಳ ಸ್ಥಿತಿ ಹೇಗಿದೆ?

ಬರಡಾಗಿವೆ.

64. ಯಾವ ಎಚ್ಚರದೊಳು ಬದುಕಬೇಕಿದೆ?

ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

65. ಶ್ರೀಕೃಷ್ಣ ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?

ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು

66. ಕುಮಾರ ವ್ಯಾಸನ ಆರಾಧ್ಯ ದೈವ ಯಾರು?

ಗದುಗಿನ ವೀರನಾರಾಯಣ.

67. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?

ನಕುಲ ಮತ್ತು ಸಹದೇವ.

68. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು?

'ರೂಪಕ ಸಾಮ್ರಾಜ್ಯ ಚಕ್ರವರ್ತಿ'

69. ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?

ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿದ್ದರಿಂದ

70. 'ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು?

ಲಕ್ಷ್ಮೀಶ

71. ಯಜ್ಞಾಶ್ವವನ್ನು ಕಟ್ಟಿದವರು ಯಾರು?

ಲವ

72. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

ಉತ್ತರೀಯದಿಂದ

73. ಮುನಿಸುತರು ಹೆದರಲು ಕಾರಣವೇನು?

ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ

74. ಮಣ್ಣಿನ ಮಾಲೀಕ ಯಾರು?

ಮಾನವ.

75. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?

ಮಣ್ಣಿನ ಮಾಲೀಕ ಆದೆನೆಂಬ ಮತ್ತಿನಲ್ಲಿ  ಭೂಮಿಯ ಮೇಲೆ ಗೆರೆ ಎಳೆದು

76. ಮಾನವನ ಕಾದಾಟಕ್ಕೆ ಕಾರಣವೇನು?

ಹಮ್ಮು (ಗರ್ವ)

77. ಅಜ್ಞಾನ ತೊಲಗಿಸಲು ಕವಯತ್ರಿ ಏನಾಗ ಬಯಸಿದ್ದಾರೆ ?

ವಾಗ್ದೇವಿಯ ಕೈಯಲ್ಲಿನ ಗ್ರಂಥ

78. ಸದಾ ಚಿಮ್ಮುವ ಚಿಲುಮೆಯಾಗ ಬೇಕು ಏಕೆ ?

ದಾಹಗೊಂಡವರ ತನುವ ತಣಿಸಲು

79. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?

ದಟ್ಟ ಕಾಡಿನ ಮರದ ಪೊಟರೆಯಲ್ಲಿ

80. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

ಒಂದನ್ನೊಂದು ಅಗಲದಂತೆ

81. ಪಾರಿವಾಳಗಳ ಆನಂದಕ್ಕೆ ಕಾರಣವೇನು ?

ಮುದ್ದು ಮರಿಗಳ ಸದ್ದನ್ನು ಕೇಳಿ

ಈ ಕಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ ಉತ್ತರಕ್ಕಾಗಿಯೋ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. **10 X1=10**

**41.** ಅಜ್ಜ : ಸಜಾತಿ ಸಂಯುಕ್ತಾಕ್ಷರ :: ಭಕ್ತ :-------------
**42.** ಬನ್ನಿ ಬನ್ನಿ : ದ್ವಿರುಕ್ತಿ :: ಹುಳಹುಪ್ಪಡಿ :-------------
**43.** ಕಳುವ್ಯಾರೆ : ಕಳುಹಿಸಿದ್ದಾರೆ :: ಇಲ್ಲಹ್ವಂಗ :-------------
**44.** ತಂಬಾಕು : ಪೋರ್ಚುಗೀಸ್ :: ಬಂದೂಕು :-----------

ಈ ಕಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. **1X3=3**

**45.** ಏನು ಹೇಳೈಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂರುಗಳ ಬೆಸಕೈಸಿಕೊಂಬುವುದು ಸೇರದೇನಿನಗೆ

ಅಥವಾ

ಕುರುಕುಳನಂದನಂ ಪವನಂದನನೆಂಬ ಮದಾಂಧಗಂಧಸಿರಿ.

ಈ ಕೆಳಗಿನ ವಾಕ್ಯಗದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಿಸಿರಿ **1X3=3**

**46.** 'ಸಿಡಿಲ ಸಿಡಿದ್ಹಾಂಗ್ ಗುಂಡು ಸುರಿದಾವ'

ಅಥವಾ

'ಮಾರಿಗೌತಣವಾಯ್ತುಂ ನಾಳಿನ ಭಾರತವು'

'ಭಾಗ–ಸಿ'

ಕೆಳಗಿನ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1**X3=3**

**47.** * ದೇಶಸುತ್ತಿ ನೋಡು ಕೋಶ ಓದಿ ನೋಡು
* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?
* ಅತಿ ಆಸೆ ಗತಿ ಕೇಡು

48. ನಿಮ್ಮನ್ನು ಬೆಳಗಾವಿಯ ವಿವೇಕಾನಂದ ಪ್ರೌಢಶಾಲೆಯ ಸುಮಂತ ಎಂದು ಭಾವಿಸಿಕೊಂದು ನಿಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯ ಆರಂಭಿಸಿ ಕೊಡುವಂತೆ ನಿಮ್ಮ ಜಿಲ್ಲಾಧಿಕಾರಿಗೊಂದು ಮನವಿ ಪತ್ರ ಬರೆಯಿರಿ. **1X5=5**

ಅಥವಾ

ನಿಮ್ಮನ್ನು ಬೆಳಗಾವಿಯ ವಿವೇಕಾನಂದ ಪ್ರೌಢಶಾಲೆಯ ಸುಮಂತ ಎಂದು ಭಾವಿಸಿಕೊಂದು ನಿಮ್ಮ ಪರೀಕ್ಷಾ ಪೂರ್ವ ಸಿದ್ದತೆ ಕುರಿತು ಬಳ್ಳಾರಿಯಲ್ಲಿರುವ ನಿಮ್ಮ ತಂದೆಗೆ ಒಂದು ಪತ್ರವನ್ನು ಬರೆಯಿರಿ.

49. ಈ ಕಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಲ್ಲಿ ಕಡಿಮೆ ಇಲ್ಲದಂತೆ ಪ್ರಬಂದ ಬರೆಯಿರಿ. **1X5=5**

- ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ.
- ಶಿಕ್ಷಣದಲ್ಲಿ ಗಣಕಯಂತ್ರ ಪಾತ್ರ
- ಶಾಲಾ ಗ್ರಂಥಗಳ ಸದ್ಬಳಕೆ.

-----*****-----